# ಪುಸ್ತಕ ಪ್ರಕಟಿಸಿದ ನೆನಪಿನಲ್ಲಿ...




ಲಂಕೇಶ್ ಅತಿಥಿಗಳಾಗಿದ್ದ ಪುಸ್ತಕ ಬಿಡುಗಡೆ ಸಮಾರಂಭ

**ನಾನು ಬರೆದ ಕಥೆಗಳ ಸಂಕಲನ 'ಯಾವ ಜನ್ಮದ ಮೈತ್ರಿ' ಕೃತಿಯನ್ನು ಹಿರಿಯ ಲೇಖಕ ಪಿ. ಲಂಕೇಶ್ ಅವರು ಬಿಡುಗಡೆ ಮಾಡಿದ್ದು ತುಂಬ ಖುಷಿ ತಂದಿತ್ತು. ಪುಸ್ತಕ ಪ್ರಕಟಣೆಯ ಹಿಂದಿನ ಶ್ರಮವನ್ನು ಇಂಚಿಂಚೂ ಅರಿತಿದ್ದ ನಾನು ಆ ಪುಸ್ತಕಕ್ಕೆ ಮುಖಪುಟ ಚಿತ್ರ ರಚಿಸಿ, ನಾನೇ ಬೈಂಡಿಂಗ್ ಕೂಡ ಮಾಡಿದ್ದು ಸಾಹಸ ಕೆಲಸವೇ ಸರಿ.**

■ **ಯಶವಂತ ವಾಜಂತ್ರಿ**

ಲೇಖನ, ಕಥೆ, ಕಾದಂಬರಿ ಬರೆಯುವುದು ಹವ್ಯಾಸವಾದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅದನ್ನು ಪ್ರಕಟಿಸುವುದು ಮತ್ತೊಂದು ಸಾಹಸ.

1990ರಲ್ಲಿ ನಾನು ಪುಸ್ತಕ ಪ್ರಕಟಿಸುವ ಸಾಹಸಕ್ಕೆ ಕೈ ಹಾಕಿದೆ. ಆರ್ಥಿಕವಾಗಿ ಸಬಲನಲ್ಲದಿದ್ದರೂ ಉತ್ಸಾಹಕ್ಕೇನೂ ಕೊರತೆಯಿರಲಿಲ್ಲ. ನಮ್ಮೂರಿನಲ್ಲಿಯೇ ಇರುವ ಶ್ರೀ ಶಂಕರ ಪ್ರೆಸ್‌ನಲ್ಲಿ ಮುದ್ರಣ ಕಾರ್ಯ ಪ್ರಾರಂಭವಾಯಿತು. ಸಾಹಿತ್ಯ ಅಕಾಡೆಮಿ ಬಳ್ಳಾರಿಯಲ್ಲಿ ಏರ್ಪಡಿಸಿದ ಸಣ್ಣ ಕಥಾ ಕಮ್ಮಟದಲ್ಲಿ ಪರಿಚಯವಾದ ಕನ್ನಡದ ಖ್ಯಾತ ಕತೆಗಾರ ಕುಂ.ವೀರಭದ್ರಪ್ಪನವರಿಗೆ ಮುನ್ನುಡಿ ಬರೆಯಬೇಕೆಂದು ಪತ್ರ ಮುಖೇನ ಭಿನ್ನವಿಸಿಕೊಂಡೆ. ಅವರು ಒಪ್ಪಿ ಸ್ವಲ್ಪ ತಡವಾದರೂ ಬರೆದು ಕಳುಹಿಸಿದರು.

ಅರವತ್ತನಾಲ್ಕು ಪುಟಗಳ ಪುಸ್ತಕ ಮುದ್ರಣ ಮುಗಿಯಿತು. ಕವರ್ ಪುಟಕ್ಕೆ ನಾನೇ ಚಿತ್ರ ರಚಿಸಿದೆ. ಪ್ರೆಸ್ಸಿನವರು ಹುಬ್ಬಳ್ಳಿಯಿಂದ ಅದರ ಬ್ಲಾಕ್ ಮಾಡಿಸಿ ತರಿಸಿದರು. ಒಂದೇ ಸಲಕ್ಕೆ ಮೂರು ಬಣ್ಣಗಳಲ್ಲಿ ಮುದ್ರಿಸಬೇಕೆಂಬ ಉದ್ದೇಶದಿಂದ ಮುದ್ರಣ ಯಂತ್ರದ ತಿರುಗುವ ಪ್ಲೇಟನ್ನು ತಿರುಗದಂತೆ ತಡೆದು ಅದಕ್ಕೆ ಮೂರು ಬಣ್ಣಗಳನ್ನು ಲೇಪಿಸಿ ಪ್ರಿಂಟ್ ಮಾಡುವಂತೆ ಪ್ರೆಸ್ಸಿನವರಿಗೆ ಹೇಳಿದೆ. ಅವರು ಹಾಗೆಯೇ ಪ್ರಿಂಟ್ ಮಾಡಿದರು.

ಅ ಟ್ರೆಡಲ್ ಮಷೀನ್ನಲ್ಲಿಯೇ ನನ್ನ ಪುಸ್ತಕದ ಮುಖಪುಟ ಮೂರು ಬಣ್ಣಗಳಲ್ಲಿ ಅದೂ ಒಂದೇ ಸಾರಿಗೆ ಮುದ್ರಣವಾಯಿತು. ಸಾವಿರ ಪ್ರತಿಗಳನ್ನು ಬೈಂಡಿಂಗ್ ಮಾಡಲು ಪ್ರೆಸ್ಸಿನವರು ಐದು ನೂರು ರೂಪಾಯಿ ಕೇಳಿದರು. ಅದು ನನಗೆ ಹೆಚ್ಚೆನಿಸಿತು. ಅವರು ಕಮ್ಮಿ ಮಾಡಲಿಲ್ಲ. ಕೊನೆಗೆ ಆ ಮುದ್ರಿತ ಹಾಳೆಗಳನ್ನೆಲ್ಲ ಮನೆಗೆ ತಂದು ನಾನೇ ಬೈಂಡಿಂಗ್ ಮಾಡಿಕೊಂಡೆ. ಅವುಗಳನ್ನು ಪ್ರೆಸ್ಸಿಗೆ ಒಯ್ದು ಸಮನಾಗಿ ಕತ್ತರಿಸಿಕೊಂಡು ಬಂದೆ. ಹೀಗೆ ನಾನೇ ಮುಖಚಿತ್ರ ಬರೆದ, ನಾನೇ ಬೈಂಡಿಂಗ್ ಮಾಡಿಕೊಂಡ ನನ್ನ ಮೊದಲ ಪುಸ್ತಕ 'ಯಾವ ಜನ್ಮದ ಮೈತ್ರಿ' ಕಥಾ ಸಂಕಲನ ಓದುಗರ ಕೈಗೆ ಹೋಗಲು ಸಿದ್ಧವಾಯಿತು.

ಒಂದು ದಿನ ವಿಜಾಪುರದಿಂದ ರಬಕವಿಗೆ ಬಸ್ಸಿನಲ್ಲಿ ಬರುತ್ತಿದ್ದೆ. ಆ ಬಸ್ಸಿನಲ್ಲಿ ಸಾಹಿತಿ ಮಲ್ಲಿಕಾರ್ಜುನ ಹೆಗ್ಗಳಗಿ ಕುಳಿತಿದ್ದರು. ಉಭಯಕುಶಲೋಪರಿ ಮಾತುಗಳನ್ನಾಡುತ್ತ, ನಾನು ಕಥಾ ಸಂಕಲನ ಮುದ್ರಿಸಿರುವ ಬಗ್ಗೆ ಹೇಳಿದೆ. "ಹಾಗಾದರೆ ಅದನ್ನು ವಿಜಾಪುರದಲ್ಲೇ ಬಿಡುಗಡೆ ಮಾಡೋಣ, ಲಂಕೇಶ ಪತ್ರಿಕೆಯ ಸಂಪಾದಕ, ಖ್ಯಾತ ಲೇಖಕ ಪಿ.ಲಂಕೇಶ ಯಾವುದೋ ಕೆಲಸದ ನಿಮಿತ್ತ ವಿಜಾಪುರಕ್ಕೆ ಬರಲಿದ್ದಾರೆ. ಅಲ್ಲಿ ಪುಸ್ತಕ ಬಿಡುಗಡೆ ಮಾಡಿಸೋಣ. ಸ್ಫೂರ್ತಿ ಮಹಿಳಾ ಸಮಾಜದವರು ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ಹೊರುತ್ತಾರೆ. ಅತಿಥಿಗಳನ್ನು ಗೊತ್ತು ಮಾಡಿ ಕಾರ್ಡ್ ಪ್ರಿಂಟ್ ಮಾಡಿಸೇ ಬಿಡಿ" ಎಂದರು.

ನಾನು ಅವರ ಹೇಳಿಕೆ ಪ್ರಕಾರ ಸಾಹಿತಿಗಳೂ ಹಾಗೂ ನನ್ನ ಮಾರ್ಗದರ್ಶಕರಾದ ಜಿ.ಎಸ್. ವಡಗಾಂವಿ, ಅಶೋಕ ನರೋಡೆ, ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಹೆಸರುಗಳನ್ನು ಹಾಕಿ ಕಾರ್ಡನ್ನು ಮುದ್ರಣ ಮಾಡಿಸಿಯೇ ಬಿಟ್ಟೆ. ವಿಜಾಪುರದ ಕೆ.ಎಚ್.ಬಿ.ಕಾಲನಿಯಲ್ಲಿ ಸ್ಫೂರ್ತಿ ಮಹಿಳಾ ಸಮಾಜದವರು ಭವ್ಯ ವೇದಿಕೆಯನ್ನೇ ನಿರ್ಮಿಸಿದರು. ಅದರ ಅಧ್ಯಕ್ಷೆ ಶಾಮಲಾ ವರದರಾಜನ್ ಕಾರ್ಯಕ್ರಮದ ಯಶಸ್ವಿಗೆ ಬಹಳ ಶ್ರಮ ಪಟ್ಟರು. ಲಘು ಉಪಾಹಾರದ ವ್ಯವಸ್ಥೆಯನ್ನೂ ಮಾಡಿಸಿದ್ದರು. ಗೆಳೆಯ ಬಸವರಾಜ ಗವಿಮಠ ತನ್ನ ಕ್ಯಾಮೆರಾದಲ್ಲಿ ಚಿತ್ರಗಳನ್ನು ಸೆರೆ ಹಿಡಿದ. ಮರುದಿನದ ಪ್ರಮುಖ ದಿನ ಪತ್ರಿಕೆಗಳಲ್ಲೆಲ್ಲ ನನ್ನ ಪುಸ್ತಕವನ್ನು ಪಿ. ಲಂಕೇಶ ಅವರು ಬಿಡುಗಡೆ ಮಾಡಿದ ಸುದ್ದಿ ಚಿತ್ರದೊಂದಿಗೆ ಪ್ರಕಟವಾಯಿತು. ಈ ಪುಸ್ತಕ ಬಿಡುಗಡೆ ಬಗ್ಗೆ ತಮ್ಮ ಪತ್ರಿಕೆಯ ಮರೆಯುವ ಮುನ್ನ ಕಾಲಂನಲ್ಲಿಯೂ ಲಂಕೇಶ ಬರೆದರು. ಪದ್ಮಾ ಶ್ರೀರಾಮ ಅವರು ಪುಸ್ತಕದ ವಿಮರ್ಶೆಯನ್ನು ಸಹ ಲಂಕೇಶ ಪತ್ರಿಕೆಯಲ್ಲಿ ಬರೆದರು. ಆ ಪುಸ್ತಕಕ್ಕೆ ವಿಶ್ವಭಾರತೀಯ ಪರಿಷತ್ತಿನಿಂದ ಪುರಸ್ಕಾರವೂ ಬಂತು.

ಹೀಗೆ ಲಂಕೇಶ ಅವರ ಕೃಪೆಯಿಂದಾಗಿ ಮೊದಲ ಪುಸ್ತಕದಿಂದಲೇ ನಾನು ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡೆ. ಅದಕ್ಕೆ ಕಾರಣರಾದ ಮಲ್ಲಿಕಾರ್ಜುನ ಹೆಗ್ಗಳಗಿ ಮತ್ತು ಹನಮಂತ ತೆಗ್ಗಳ್ಳಿಯವರನ್ನು ಎಂದಾದರೂ ಮರೆಯಲಾದೀತೇ?. ಈ ಮಧುರ ನೆನಪು ನನ್ನ ಮನದಾಳದಲ್ಲಿ ಅಚ್ಚಳಿಯದೆ ಉಳಿದಿದೆ. ■